**ಎಂ.ವಿ.ಸಿ.ನಂ.107/2020. ಪಿ.ಡಬ್ಲ್ಯು 1 (ಮಂಜುನಾಥ)**

ದಿನಾಂಕ 15-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಸಿ ವಿ ಎಸ್ ವಕೀಲರಿಂದಃ

ವಾಸಸ್ಥಳದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 20 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ೩ನೇ ಎದುರುದಾರರ ಪರ ಶ್ರೀ ಕೆ ಎ ವಕೀಲರಿಂದಃ-

ನನಗೆ ಆಧಾರ್ ಕಾರ್ಡ್ ಇದೆ. ನನ್ನ ಆಧಾರ್ ಕಾರ್ಡ್‌ನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವುದಿಲ್ಲ. ಆಧಾರ್ ಕಾರ್ಡ್‌ನ್ನು ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆಧಾರ್ ಕಾರ್ಡ್‌ನಲ್ಲಿ ಭದ್ರಾವತಿಯ ವಿಳಾಸವಿದೆ.

ಪುರಸಭೆಯವರು ನನಗೆ ನಿಪಿ ೨೦ನ್ನು ನೀಡಿರುತ್ತಾರೆ. ಆ ದಾಖಲಾತಿಗೆ ಪುರಸಭೆಯವರು ಸಹಿ ಮಾಡಿರುತ್ತಾರೆ, ಆದರೆ ಯಾರು ಎಂದು ನನಗೆ ಹೇಳಲು ಬರುವುದಿಲ್ಲ. ಯಾವ ವಾರ್ಡಿನ ಸದಸ್ಯರು ನಿಪಿ೨೦ಕ್ಕೆ ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಕೆ.ಎಂ.ರೋಡ್ ಸುಭಾಷ್ ನಗರದಲ್ಲಿ ನಮ್ಮ ಮನೆ ಇದೆ, ಆದರೆ ಯಾವ ವಾರ್ಡ್ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ವಾಸವಿರುವ ಮನೆ ನನ್ನ ಮಾವನ ಹೆಸರಿನಲ್ಲಿ ಇದ್ದು ನಾನು ಅವರೊಂದಿಗೆ ವಾಸವಿದ್ದೆ. ನನಗೆ ಆ ಮನೆಯ ನಂಬರ್ ಹೇಳಲು ಬರುವುದಿಲ್ಲ. ಆ ಮನೆಯಲ್ಲಿ ಸುಮಾರು ೪ ವರ್ಷಗಳಿಂದ ನಾನು ವಾಸವಾಗಿದ್ದೇನೆ. ಕಡೂರು ಪಟ್ಟಣದಲ್ಲಿ ನಾನು ಚುನಾವಣಾ ಗುರುತಿನ ಚೀಟಿಯನ್ನು ನಾನು

ಪಡೆದುಕೊಂಡಿರುವುದಿಲ್ಲ. ಈಗಲೂ ಸಹಃ ನನ್ನ ಮತದಾರರ ಪಟ್ಟಿ ಭದ್ರಾವತಿಯಲ್ಲಿ ಇದೆ ಎಂದರೆ ಸರಿ. ನಾನು ಕಳೆದ ಚುನಾವಣೆಯಲ್ಲಿ ಮತವನ್ನು ಭದ್ರಾವತಿಯಲ್ಲಿ ಚಲಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಕಾಲು ನೋವು ಇದ್ದದ್ದರಿಂದ ನಾನು ಭದ್ರಾವತಿಗೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ೨೦ ರ ದಾಖಲೆಯಲ್ಲಿನ ಮನೆಯಲ್ಲಿ ನಾನು ವಾಸವಿರುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆಯ ಸದಸ್ಯರಿಗೆ ನಿಪಿ೨೦ನ್ನು ನೀಡಲು ಅಧಿಕಾರವಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ೨೦ ರ ದಾಖಲೆಯನ್ನು ಪುರಭೆಯ ಕಛೇರಿ, ಕಡೂರು ಇವರಿಂದ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ೨೦ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಸಲುವಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಅರ್ಜಿಯು ಈ ನ್ಯಾಯಾಲಯದ ಪ್ರಾದೇಶಿಕ ನ್ಯಾಯ ವ್ಯಾಪ್ತಿಯಲ್ಲಿ ಬರದಿದ್ದರೂ ಕೂಡ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ೧ ಮತ್ತು ೨ನೇ ಎದುರುದಾರರ ಪರ ವಕೀಲರು ೩ನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿಕೊಂಡಿರುತ್ತಾರೆ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.

ಕಡೂರು.